ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
Email Id: commissioner.pue @gmail.com Phone No: 080-23562033

ಸಂಖ್ಯೆ:ಪಪೂಶಿಇ/ಆ.ವಿ-ಎ/ವಿ.ನಿ-5/ಉ.ವರ್ಗಾ/2022-23 ದಿನಾಂಕ:04-08-2022.

# ಜ್ಞಾಪನ

**ವಿಷಯ**:- 2022-23ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರನ್ನು **ಶೂನ್ಯ/ ಕಾರ್ಯಭಾರ ಹೊಂದಿಲ್ಲದಿರುವ** ಎಂದು ಗುರುತಿಸಿರುವ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ**:-
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ: 27-03-2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12-05-2022.
4. ಈ ಕಚೇರಿ ಸಮಸಂಖ್ಯೆ ವರ್ಗಾವಣಾ ಮಾರ್ಗಸೂಚಿ ದಿನಾಂಕ:18-05-2022.
5. ಈ ಕಚೇರಿ ಸಮಸಂಖ್ಯೆ ಜ್ಞಾಪನ ದಿನಾಂಕ:22-06-2022, 04-07-2022 ಹಾಗೂ 20-07-2022.

*****

2022-23ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ನಡೆಸಲು ವರ್ಗಾವಣಾ ಮಾರ್ಗಸೂಚಿಯನ್ನು ಉಲ್ಲೇಖ-2ರ ಜ್ಞಾಪನದಂತೆ ಪ್ರಕಟಿಸಲಾಗಿದೆ. ಈ ಶೈಕ್ಷಣಿಕ ಸಾಲಿನ ಉಪನ್ಯಾಸಕರ ವರ್ಗಾವಣೆಯಲ್ಲಿ ಶೂನ್ಯ ಹಾಗೂ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೂ ವರ್ಗಾವಣೆಯನ್ನು ನಡೆಸಬೇಕಾಗಿದೆ.

2021-22ನೇ ಶೈಕ್ಷಣಿಕ ಸಾಲಿನಲ್ಲಿ ಶೂನ್ಯ ಹಾಗೂ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರ ಪರಿಷ್ಕೃತ ತಾತ್ಕಾಲಿಕ ಪಟ್ಟಿಯನ್ನು ಉಲ್ಲೇಖ-5ರ ದಿನಾಂಕ: 20-07-2022ರಂದು ಪ್ರಕಟಿಸಿ, ಸದರಿ ಪಟ್ಟಿಗೆ ಸಂಬಂಧಿಸಿದ ಉಪನ್ಯಾಸಕರುಗಳಿಂದ ಆಕ್ಷೇಪಣೆಗಳಿದ್ದಲ್ಲಿ, ಅವುಗಳನ್ನು ಜಿಲ್ಲಾ ಉಪ ನಿರ್ದೇಶಕರ ಕಚೇರಿಯವರು ನಿರ್ದೇಶನಾಲಯಕ್ಕೆ ಸ್ಪಷ್ಟ ಅಭಿಪ್ರಾಯದೊಂದಿಗೆ ಸಲ್ಲಿಸಲು ತಿಳಿಸಲಾಗಿತ್ತು. ಅದರಂತೆ, ಜಿಲ್ಲಾ ಉಪ ನಿರ್ದೇಶಕರ ಕಚೇರಿ ಸಿಬ್ಬಂದಿಗಳು ಶೂನ್ಯ ಹಾಗೂ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಮಾಹಿತಿಯನ್ನು ಒದಗಿಸಿರುತ್ತಾರೆ.

ನಿರ್ದೇಶನಾಲಯದಿಂದ ಒದಗಿಸಲಾದ ಶೂನ್ಯ ಹಾಗೂ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರ ಪಟ್ಟಿಗೆ ಸಂಬಂಧಿಸಿದ ಉಪನ್ಯಾಸಕರು/ಪ್ರಾಂಶುಪಾಲರು ಸಲ್ಲಿಸಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸಿದೆ. ಶೂನ್ಯ ಹಾಗೂ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರ ಸ್ಥಳನಿಯುಕ್ತಿ ಕೌನ್ಸೆಲಿಂಗ್ ಅನ್ನು ದಿನಾಂಕ: 05-08-2022ರ ಮಧ್ಯಾಹ್ನ 03-00 ಗಂಟೆಗೆ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಲ್ಲಿ ಅಥವಾ ಜಿಲ್ಲಾ ಉಪ ನಿರ್ದೇಶಕರು ಸೂಚಿಸುವ ಸ್ಥಳದಲ್ಲಿ ಝೂಮ್ ತಂತ್ರಾಂಶದ ಮೂಲಕ ನಡೆಸಲಾಗುವುದು. ಶೂನ್ಯ ಹಾಗೂ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರ ಪಟ್ಟಿಯಲ್ಲಿರುವ ಉಪನ್ಯಾಸಕರುಗಳು ಸದರಿ ದಿನಾಂಕದಂದು ಮಧ್ಯಾಹ್ನ 02-00 ಗಂಟೆಗೆ ಹಾಜರಿರಲು ಸೂಚಿಸಿದೆ. ಉಪನ್ಯಾಸಕರುಗಳು ತಮ್ಮೊಂದಿಗೆ ಇಲಾಖೆಯಿಂದ ಒದಗಿಸಿರುವ ಗುರುತಿನ ಚೀಟಿಯನ್ನು ಹಾಗೂ ಕಾಲೇಜು ಪ್ರಾಂಶುಪಾಲರಿಂದ ಸೇವಾ ದೃಢೀಕರಣ ಪತ್ರವನ್ನು ಹೊಂದಿರಲು ಸೂಚಿಸಿದೆ.

2..........

**ಶೂನ್ಯ/ಹೆಚ್ಚುವರಿ ಕಾರ್ಯಭಾರ ಹೊಂದಿಲ್ಲದಿರುವ ವಿವಿಧ ವಿಷಯಗಳ ಉಪನ್ಯಾಸಕರು ಉಲ್ಲೇಖ-3ರ ವರ್ಗಾವಣಾ ನಿಯಮ-15(2) ರಲ್ಲಿ ಸೂಚಿಸಿರುವಂತೆ 'ಸಿ' ವಲಯದಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು.** 'ಸಿ' ವಲಯದಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಮಾಹಿತಿಯನ್ನು [ಜಿಲ್ಲಾವಾರು, ಕಾಲೇಜುವಾರು ಮತ್ತು ವಿಷಯವಾರು] ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಯಾವುದೇ ಉಪನ್ಯಾಸಕರು ಖಾಲಿ ಹುದ್ದೆಯನ್ನು ತೆಗೆದುಕೊಳ್ಳಲು ನಿರಾಕರಿಸಿದರೆ ಅಥವಾ ವರ್ಗಾವಣೆ ಪ್ರಕ್ರಿಯೆಗೆ ಗೈರುಹಾಜರಾದರೆ, ಕೌನ್ಸೆಲಿಂಗ್ ಪ್ರಕ್ರಿಯೆ ಮುಗಿದ ನಂತರ ಡಮ್ಮಿ [ನೆಪ ಮಾತ್ರ[ ಕೌನ್ಸೆಲಿಂಗ್ ಪ್ರಕ್ರಿಯೆ ಮೂಲಕ ವರ್ಗಾಯಿಸಿ ಆದೇಶಿಸಲಾಗುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ರವರಿಗೆ:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಮಾಹಿತಿಗಾಗಿ.
2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ಶೂನ್ಯ-ಹೆಚ್ಚುವರಿ ಕಾರ್ಯಭಾರ ಹೊಂದಿರುವ ವಿವಿಧ ವಿಷಯಗಳ ಉಪನ್ಯಾಸಕರುಗಳಿಗೆ – ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಕಚೇರಿ/ಹೆಚ್ಚುವರಿ ಪ್ರತಿ.